**ಅಸಲು ದಾವಾ ನಂಃ** 10/2013

**ಡಿಡಬ್ಲ್ಯೂ:** 01

**ದಿನಾಂಕಃ 29.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಶ್ರೀ ಆರ್.ಎಸ್.ಎಂ., ಪ್ರತಿವಾದಿ ಪರ ವಕೀಲರಿಂದ**

ಐಟಂ ನಂ.1 ರ ವಿಸ್ತೀರ್ಣ 4 ಎಕರೆ 30 ಗುಂಟೆ ಇರುತ್ತದೆ ಎಂದರೆ ಸರಿ. ಅದೇ ರೀತಿ ಐಟಂ ನಂ.2 ರ ವಿಸ್ತೀರ್ಣ 11 ಎಕರೆ 3 ಗುಂಟೆ ಇರುತ್ತದೆ ಎಂದರೆ ಸರಿ. ಐಟಂ ನಂ. 3 ರ ವಿಸ್ತೀರ್ಣ 8 ಎಕರೆ 6 ಗುಂಟೆ ಇರುತ್ತದೆ ಎಂದರೆ ಸರಿ.

ಐಟಂ ನಂ.1 ರ ಪೂರ್ವಕ್ಕೆ ಮುನಿಯಾನಾಯ್ಕುನ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ದೇವರಹಳ್ಳಿದಾರಿ ಎಂದರೆ ಸರಿ. ಉತ್ತರಕ್ಕೆ ನಾಯಕನಹಟ್ಟಿ – ತಳಕು ರಸ್ತೆ ಎಂದರೆ ಸರಿ. ದಕ್ಷಿಣಕ್ಕೆ ಲಕ್ಷ್ಮನಾಯ್ಕುನ ಜಮೀನು ಎಂದರೆ ಸರಿ.

ಐಟಂ ನಂ.2 ರ ಪೂರ್ವಕ್ಕೆ ಮುನಿಯಾನಾಯ್ಕುನ ಜಮೀನು ಎಂದರೆ ಸರಿ.ಪಶ್ಚಿಮಕ್ಕೆ ದೇವರಹಳ್ಳಿ ದಾರಿ ಎಂದರೆ ಸರಿ. ಉತ್ತರಕ್ಕೆ ಅಬ್ಬನಾಯಕನ ಜಮೀನು, ದಕ್ಷಿಣಕ್ಕೆ ನಾಯಕನಹಟ್ಟಿ – ತಳಕು ರಸ್ತೆ ಎಂದರೆ ಸರಿ.

ಐಟಂ ನಂ.3 ರ ಪೂರ್ವಕ್ಕೆ ಮುನಿಯಾನಾಯ್ಕುನ ಜಮೀನು ಎಂದರೆ ಸರಿ.ಪಶ್ಚಿಮಕ್ಕೆ ದೇವರಹಳ್ಳಿ ದಾರಿ ಎಂದರೆ ಸರಿ. ಉತ್ತರಕ್ಕೆ ನಾಯಕನಹಟ್ಟಿ – ತಳಕು ರಸ್ತೆ ಎಂದರೆ ಸರಿ. ದಕ್ಷಿಣಕ್ಕೆ ರಾಮಚಂದ್ರಾನಾಯ್ಕುನ ಜಮೀನು ಎಂದರೆ ಸರಿ.

ಕಾಳ್ಯಾನಾಯ್ಕು ತಂದೆ ಹೇಮ್ಲಾನಾಯ್ಕು ರವರು ಯಾವಾಗ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ಅದೇ ರೀತಿ ಚಾಂದಿಬಾಯಿ ಕೋಂ ಕಾಳ್ಯಾನಾಯ್ಕು ಯಾವಾಗ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ.

ದಾವಾ ಷೆಡ್ಯೂಲ್ ಸ್ವತ್ತುಗಳನ್ನು ಈ ಹಿಂದೆ ಯಾರು ಯಾರು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಪಾಲು ವಿಭಾಗದ ಪ್ರಕಾರ ಯಾರ ಯಾರ ಹಿಸ್ಸೆಗೆ ಎಷ್ಟು ವಿಸ್ತೀರ್ಣದ ಸ್ವತ್ತು ಬಂದಿರುತ್ತದೆ ಎಂದು ಬಹಳ ದಿನಗಳಾಗಿರುವ ಕಾರಣ ಹೇಳಲು ಆಗುವುದಿಲ್ಲ. ಪಾಲು ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆಯೇ ಎಂದರೆ ಸಾಕ್ಷಿಯ ಬಾಯಿ ಮಾತಿನ ಮೂಲಕ ಪಾಲುವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 28 ಕ್ಕೆ ಸಂಬಂಧಿಸಿದಂತೆ ಪ್ರಸ್ತುತ ದಾವೆಯಲ್ಲಿ ವ್ಯಾಜ್ಯ ನಡೆಯುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂಬರ್ 25/1, 25/2, 25/3 ರ ಜಮೀನುಗಳಿಗೆ ಸಂಬಧಿಸಿದಂತೆ ವ್ಯಾಜ್ಯ ನಡೆಯುತ್ತಿದೆ. ನಿಡಿ.11 ಕ್ಕೆ ಸಂಬಂದಿಸಿದ ಮ್ಯುಟೇಷನ್ ರಿಜಿಸ್ಟರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸರ್ವೆ ನಂಬರ್ 25/3 ರಲ್ಲಿ ಒಟ್ಟು 11 ಎಕರೆ 3 ಗುಂಟೆ ಜಮೀನು ಇದ್ದು, ನಿಡಿ.11 ರ ಪ್ರಕಾರ ಉಳಿದ ಜಮೀನು ನನ್ನ ದೊಡ್ಡಪ್ಪನ ಹೆಸರಿನಲ್ಲಿ ಇರುತ್ತದೆ. ಅದಕ್ಕೆ ಸಂಬಂದಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನ್ನ ತಾತ ಮೃತರಾದ ನಂತರ ನನ್ನ ದೊಡ್ಡಪ್ಪ ರಾಮ್ಜಿನಾಯ್ಕ ರವರಿಗೆ ಸದರಿ ಜಮೀನು ಬಂದಿರುತ್ತದೆ. ದಾವಾ ಐಟಂ ನಂ.3 ರ ಮ್ಯುಟೇಷನ್ ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೇವೆ ಎಂದು ನುಡಿಯುತ್ತಾರೆ.

ನಿಡಿ.10 ರಿಂದ 16 ದಾಖಲೆಗಳು ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.7 ರ ಪ್ರಕಾರ ರಾಮ್ಜಿನಾಯ್ಕ ಮತ್ತು ನಂದ್ಯಾನಾಯ್ಕ ರವರ ಹೆಸರಿನಲ್ಲಿ ಒಟ್ಟು 7 ಎಕರೆ 37 ಎಕರೆ ಇರುತ್ತದೆ ಎಂದರೆ ಸರಿ . ನಿಡಿ.4 ರ ಪ್ರಕಾರ ರಾಮ್ಜಿನಾಯ್ಕ ಮತ್ತು ಚಂದ್ರನಾಯ್ಕ ರವರು ಒಟ್ಟು 5 ಜಮೀನುಗಳನ್ನು ನಂದ್ಯಾನಾಯ್ಕ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಿಡಿ.4 ರ ಪ್ರಕಾರ ರಾಮ್ಜಿನಾಯ್ಕ ಮತ್ತು ಚಂದ್ರನಾಯ್ಕ ಮತ್ತು ನಂದ್ಯಾನಾಯ್ಕ ರವರು ಸರ್ವೆ ನಂಬರ್ 25/1 ರ ಜಮೀನನ್ನು ಲಾಲಿಬಾಯಿ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ರಾಮ್ಜಿನಾಯ. ಚಂದ್ರನಾಯ್ಕ ಮತ್ತು ನಂದ್ಯಾನಾಯ್ಕ ರವರ ನಡುವೆ ಇದುವರೆಗೂ ಯಾವುದೇ ಪಾಲುವಿಭಾಗ ಆಗದೇ ಇದದರೂ ನಿಡಿ.4 ಮತ್ತು 5 ರ ದಾಖಲೆಗಳನ್ನು ಸೃಷಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಲಚ್ಮಾನಾಯ್ಕ ಬಿನ್ ಚಂಧ್ರಾನಾಯ್ಕ ರವರ ತಂದೆ ದಿನಾಂಕ 03.11.1997 ರಂದು ಮೃತರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಂಗ್ಲಿಬಾಯಿ ಕೋಂ ಚಂಧ್ರಾನಾಯ್ಕ ರವರು ದಿನಾಂಕ 20.07.2000 ರಂದು ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯವರಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ವಾದಿಯರನ್ನು ಬಿಟ್ಟು ನಿಡಿ.1 ವಂಶವೃಕ್ಷವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ.55 ವಂಶವೃಕ್ಷವನ್ನು ಈ ದಾವೆಗಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರ ತಾತ ಮೃತರಾದ ನಂತರ ದಾವಾ ಷೆಡ್ಯೂಲ್

**ಅಸಲು ದಾವಾ ನಂಃ 10/2013**

ಡಿಡಬ್ಲ್ಯೂ: 01

ಸ್ವತ್ತುಗಳು ರಾಮ್ಜಿನಾಯ್ಕು ಮತ್ತು ನಂದ್ಯಾನಾಯ್ಕು ರವರ ಹೆಸರಿನಲ್ಲಿ ಖಾತೆಯಾಗಿದ್ದು, ಇದೂವರೆಗೆ ವಾದಿ ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿ ಜಂಟಿಯಾಗಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ವಾದಿಯವರಿಗೆ 1/3 ಭಾಗದ ಹಕ್ಕನ್ನು ಎತ್ತಿ ಹಾಕಿಬೇಕು ಎಂಬ ಉದ್ದೇಶದಿಂದ ಯಾವುದೇ ಪಾಲುವಿಭಾಗ ಆಗದೇ ಇದ್ದರೂ ಪಾಲುವಿಭಾಗ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳನ್ನು ನಾವು 2012 ರಲ್ಲಿ ಮಾರಾಟ ಮಾಡಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ಆಗ ವಾದಿಯರು ಡಿಸೆಂಬರ್ 2012 ರಲ್ಲಿ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ತಮಗೆ ಬರಬೇಕಾದ 1/3 ಭಾಗ ಹಿಸ್ಸೆಯನ್ನು ಕೇಳಿದ್ದರು ಎಂದರೆ ಸರಿಯಲ್ಲ. ದಿನಾಂಕ 20.12.1976 ನೇ ಇಸ್ವಿಯಲ್ಲಿ ರಾಮ್ಜಿನಾಯ್ಕು ಮತ್ತು ಚಂದ್ರಾನಾಯ್ಕು ರವರು ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಪಾಲು ವಿಭಾಗದ ಪ್ರಕಾರ ಖಾತೆ ಬದಲಾವಣೆ ಆಗಿರುವುದಿಲ್ಲ. ಪಾಲು ವಿಭಾಗದ ಪ್ರಕಾರ ಕಂದಾಯ ದಾಖಲೆಗಳನ್ನು ನಮ್ಮ ಹೆಸರಿಗೆ ಬದಲಾವಣೆ ಮಾಡಿಕೊಳ್ಳಲು ನಾವು ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ನಿಪಿ.1 ರ ವಂಶವೃಕ್ಷವು ನಿಜವಾದ ವಂಶವೃಕ್ಷವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.